ವರಾಹಿ ನೀರಾವರಿ ಯೋಜನೆ ಬಗ್ಗೆ.

೧೧೧೬ (ಎ). ಶ್ರೀ ಜೆ. ಎಸ್. ಅಚಾರ್ (ಬೈಂದೂರು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಸಹಸ್ರಾರು ಎಕರೆ ಜಮೀನಿಗೆ ನೀರು ಪೂರೈಸುವ ವರಾಹಿ ನೀರಾವರಿ ಯೋಜನೆಯು ಕುರಿತು ಸಾರ್ವಜನಿಕರ ಹಾಗೂ ಶಾಸಕರ ಒತ್ತಾಯ ವಿರುವುದು ನಿಜವಲ್ಲವೇ ?

ಆ) ಈ ಯೋಜನೆಯನ್ನು ಮುಂದಿನ ವರ್ಷ ಖಂಡಿತ ಕೈಗೆತ್ತಿಕೊಳ್ಳಲಾಗುವುದೆಂದು ಮಾನ್ಯ ಸಚಿವರು ಕಳೆದ ವರ್ಷ ಸದನದಲ್ಲಿ ವಾಗ್ದಾನವಿತ್ತಿದ್ದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ, ಯೋಜನೆಯು ಪ್ರಗತಿಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ಆಣೆಕಟ್ಟು ಮತ್ತು ನಾಲೆಯ ನಿರ್ಮಾಣ ಹಾಗೂ ಮುಳುಗಡೆಯಾಗುವ ಪ್ರದೇಶದಲ್ಲಿ ಅರಣ್ಯ ಭೂಮಿಯನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವುದೇ ಯೋಜನಾ ಪ್ರಗತಿಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಮೂಲ ಕಾರಣ.

ಚಿತ್ರದುರ್ಗ ಜಿಲ್ಲೆಯ ಸರಕಾರಿ ಪ್ರೌಢ ಶಾಲೆಗಳ ಬಗ್ಗೆ.

೧೧೩೫. ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಜಗಳೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು (ತಾಲ್ಲೂಕು ವಾರು ವಿವರಗಳನ್ನು ಒದಗಿಸುವುದು)

ಆ) ಈ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆಯೇ ?

ಇ) ಇಲ್ಲದಿದ್ದಲ್ಲಿ ಎಷ್ಟು ಶಾಲೆಗಳಿಗೆ ಸ್ವಂತ ಕಟ್ಟಡಗಳಿರುವುದಿಲ್ಲ (ತಾಲ್ಲೂಕು ವಾರು ವಿವರ ಗಳನ್ನು ಒದಗಿಸುವುದು).

ಈ) ಎಲ್ಲಾ ಶಾಲೆಗಳಿಗೂ ಯಾವಾಗ ಕಟ್ಟಡಗಳನ್ನು ಒದಗಿಸಲಾಗುವುದು.

ಶ್ರೀ ಡಿ ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೮೨ (ಪ್ರೌಢ : ಕಿರಿಯ ಕಾಲೇಜುಗಳುಸೇರಿ) ಪಟ್ಟಿ ಲಗತ್ತಿಸಿದೆ.

ಆ) ೪೮ ಪ್ರೌಢ ಶಾಲೆ (ಕಿರಿಯ ಕಾಲೇಜುಗಳು ಸೇರಿ)

ಇ) ೩೪ (ಪಟ್ಟಿ ಲಗತ್ತಿಸಿದೆ)

ಈ) ಪ್ರತಿ ವರ್ಷ ಆಯವ್ಯಯದಲ್ಲಿ ಜಿಲ್ಲಾ ಪರಿಷತ್‌ಗೆ ಹಣ ಒದಗಿಸಲಾಗುತ್ತದೆ. ಅದ್ಯತೆಯ ಮೇಲೆ ಹಂತ ಹಂತವಾಗಿ ಕಟ್ಟಡಗಳನ್ನು ಜಿಲ್ಲಾ ಪರಿಷತ್ ನಿರ್ಮಿಸುತ್ತದೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಒಟ್ಟು ಪ್ರೌಢ ಶಾಲೆಗಳು : ಕಿರಿಯ ಕಾಲೇಜುಗಳ ಸಂಖ್ಯೆ	ಸ್ವಂತ ಕಟ್ಟಡಗಳ ಸಂಖ್ಯೆ	ಕಟ್ಟಡ ಇಲ್ಲದೆ ಇರುವ ಸಂಖ್ಯೆ	ಷರಾ	
೧	೨	೩	೪	೫	೬	
೧	ಚಿತ್ರದುರ್ಗ	೧೦	೮	೨	೧	ಪ್ರೌಢಶಾಲೆ ಬಾಡಿಗೆ ರಹಿತ ಕಟ್ಟಡದಲ್ಲಿದೆ.
					೧	ಪ್ರಾಥಮಿಕ ಶಾಲೆಯು ಕಟ್ಟಡದಲ್ಲಿ ನಡೆಯುತ್ತಿದೆ.
೨	ಚಳ್ಳಕೆರೆ	೧೪	೯	೫	೪	ಬಾಡಿಗೆ ರಹಿತ ಕಟ್ಟಡದಲ್ಲಿ ನಡೆಯುತ್ತಿದೆ.
					೧	ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿದೆ.
೩	ದಾವಣಗೆರೆ	೧೩	೯	೪	೩	ಶಾಲೆ ಬಾಡಿಗೆ ರಹಿತ
					೧	ಶಾಲೆ ಬಾಡಿಗೆ ಸಹಿತ
೪	ಹರಿಹರ	೧೦	೪	೬	೫	ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಯುತ್ತವೆ.
					೧	ಬಾಡಿಗೆ ರಹಿತ ಕಟ್ಟಡದಲ್ಲಿ ನಡೆಯುತ್ತಿದೆ.
೫	ಹಿರಿಯೂರು	೧೩	೯	೪	೧	ಪ್ರಾಥಮಿಕ ಶಾಲ ಕಟ್ಟಡದಲ್ಲಿ ನಡೆಯುತ್ತಿದೆ.
					೩	ಬಾಡಿಗೆ ರಹಿತ.
೬	ಹೊಳಲ್ಕೆರೆ	೭	೨	೫	೫	ಪ್ರೌಢ ಶಾಲೆಗಳು ಬಾಡಿಗೆ ರಹಿತ ಕಟ್ಟಡದಲ್ಲಿ ನಡೆಯುತ್ತಿದೆ.
೭	ಜಗಳೂರು	೭	೩	೪	೪	ಪ್ರೌಢ ಶಾಲೆ ಬಾಡಿಗೆ ರಹಿತ ಕಟ್ಟಡದಲ್ಲಿ ನಡೆಯುತ್ತಿದೆ.

೧	೨	೩	೪	೫	೬
೮	ಮೊಳಕಾಲ್ಮೂರು	೩	೨	೦	೦ ಪ್ರೌಢ ಶಾಲೆ ಬಾಡಿಗೆ ರಹಿತ ಕಟ್ಟಡದಲ್ಲಿ ನಡೆಯುತ್ತಿದೆ.
೯	ಹೊಸದುರ್ಗ	೫	೨	೩	೦ ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಯುತ್ತಿದೆ
					೨ ಬಾಡಿಗೆ ಸಹಿತ ಕಟ್ಟಡದಲ್ಲಿ ನಡೆಯುತ್ತಿದೆ.
		೮೨	೫೮	೩೪	

ಶಿವಮೊಗ್ಗ ನಗರದ ಸಮೀಪ ತುಂಗಾ ನದಿಗೆ ಹೊಸ ಸೇತುವೆ.

೧೨೬೬. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).— ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ನಗರ ಸಮೀಪ ತುಂಗಾನದಿಗೆ ನಿರ್ಮಿಸಿರುವ ಹೊಸ ಸೇತುವೆ ಕಾರ್ಯ ಪೂರ್ಣಗೊಂಡು ಎಷ್ಟು ಕಾಲಾವಧಿಯಾಗಿದೆ ?

ಆ) ಸೇತುವೆಗೆ ಸಂಬಂಧಿಸಿದ ಕೂಡು ರಸ್ತೆಗಳ (ಅಪ್ರೋಚ್‌ರೋಡ್) ನಿರ್ಮಾಣ ತುಂಬಾ ವಿಳಂಬವಾಗಿರುವುದರಿಂದ ಸಾರ್ವಜನಿಕರ ಉಪಯೋಗಕ್ಕೆ ಹೊಸ ಸೇತುವೆ ಲಭ್ಯವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಕೂಡು ರಸ್ತೆಗಳನ್ನು ಶೀಘ್ರಗತಿಯಲ್ಲಿ ನಿರ್ಮಿಸಿ ಹೊಸ ಸೇತುವೆಯನ್ನು ಸಾರ್ವಜನಿಕ ಉಪಯೋಗಕ್ಕೆ ಬಿಡುಗಡೆ ಮಾಡಲು ಸರ್ಕಾರದವರು ಅಗತ್ಯ ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ, ಕಾಡಾ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಸುಮಾರು ೨ ವರ್ಷಗಳಾಗಿದೆ.

ಆ) ಕೂಡು ರಸ್ತೆ ಕೆಲಸದ ವಿಳಂಬದಿಂದ ಹೊಸ ಸೇತುವೆಯು ಉಪಯೋಗವು ಪೂರ್ತಿಯಾಗಿ ಲಭ್ಯವಾಗದಿದ್ದರೂ ಹಗುರ ಪ್ರಮಾಣದ ಕಾರು, ವ್ಯಾನು ಗಾಡಿ ಇತ್ಯಾದಿ ವಾಹನಗಳು ಸೇತುವೆಯ ಮೇಲೆ ಹಾದು ಪಕ್ಕದ ಸಣ್ಣ ರಸ್ತೆ (ಹಳೆ ತೀರ್ಥಹಳ್ಳಿ ರಸ್ತೆ) ಯಿಂದ ತೀರ್ಥಹಳ್ಳಿ ರಸ್ತೆಗೆ ಸಂಚರಿಸುತ್ತಿದೆ.

ಇ) ಪೂರ್ತಿ ಭೂಮಿ ಸ್ವಾಧೀನಕ್ಕೆ ಬಂದಿಲ್ಲ. ಇದನ್ನು ತ್ವರಿತಗೊಳಿಸಿ, ಭೂಮಿ ಸ್ವಾಧೀನಕ್ಕೆ ಬಂದ ಮೇಲೆ ಕೂಡು ರಸ್ತೆಯ ಉಳಿದ ಕೆಲಸ ಮಾಡಲಾಗುವುದು.